
ಪ್ರದೀಪಕುಮಾರ, ಹೂವಿನಹಡಗಲಿ
ಇಂದಿನ ಮಹಿಳೆಯರು ಮೌಸ್‌ನಿಂದ ರಂಗೋಲಿ ಹಾಕುತ್ತಾ ರಂತಲ್ಲಾ?



ನೆಟ್‌ಗೆ ರಂಗೋಲಿ ಹಾಕಬೇಕಾದರೆ ಅದೇ ಸರಿಯಂತೆ!

ಜಾಕೋಬ್ ಡಿಸೋಜಾ, ಕುರುವಳ್ಳಿ
ಮಹಾತ್ಮ ಗಾಂಧಿ ಈಗ ಇದ್ದಿದ್ದರೆ?
ಗಾಂಧಿ ಜಯಂತಿಯಂದು ರಜೆ ಇರುತ್ತಿರಲಿಲ್ಲ.

ಅಮರಯ್ಯ ಪತ್ರಿಮಠ, ಶೋರಾಪೂರ
ಶಿಕ್ಷಣಕ್ಕೂ, ಸಂಸ್ಕಾರಕ್ಕೂ ಇರುವ ಅನುಬಂಧ?
ಸೂಕ್ತ ಶಿಕ್ಷಣ ದೊರೆತರೆ ಸಂಸ್ಕಾರ; ಶಿಕ್ಷಣ ಏರುಪೇರಾದರೆ ಅವರನ್ನು ನಂಬಿದವರ ಅಂತ್ಯಸಂಸ್ಕಾರ!

ಆರ್.ವಿಜಯಲಕ್ಷ್ಮಿ, ಬೆಂಗಳೂರು
+ ಪಾಯಿಂಟ್ ಎಂದರೆ?
+ ಚಿಹ್ನೆ ಇರುವ ವಾಹನಗಳು ದೊರೆಯುವ ಸ್ಥಳ – ನರ್ಸಿಂಗ್ ಹೋಂ!

ನಾಗದೇವಾಡಿಗ, ಕಂಬದಕೋಣೆ
ತಾವು ನಿರ್ಮಿಸುತ್ತಿರುವ ಚಿತ್ರಗಳಿಗೆ ರಾವಣ, ಕೀಚಕ ಎಂದು ಹೆಸರಿಡುತ್ತಿರುವವರ ಅಭಿರುಚಿಗೆ ಏನೆನ್ನಬೇಕು?




ಏಕೆ ಅನ್ನಬೇಕು? ರಾಘವೇಂದ್ರ ಮಟನ್ ಸ್ಟಾಲ್, ಬಾಲಾಜಿ ವೈನ್ಸ್‌ಗಳಿಗಿಂತಲೂ ಇದು ವಾಸಿ.

ಹೆಚ್.ಎನ್.ವಿಶ್ವನಾಥ್, ಶಿವಮೊಗ್ಗ
ಸತ್ಯವನ್ನು ಮರೆಮಾಚಲು ಸಾಧ್ಯವೇ ರಾಮ್‌ಜೀ?
ಯಾಕಾಗದು? ಸತ್ಯ ಎಂದೂ ವಕೀಲರ ಕೋಟಿನಲ್ಲಿ, ರಾಜಕಾರಣಿಯ ನೋಟಿನಲ್ಲಿ ಮರೆಯಾಗಿಯೇ ಇರುತ್ತದೆ.

ಡಿ.ಎಲ್.ನಾಗರಾಜ್, ಚನ್ನಗಿರಿ
ಅಂದು ಅಧಿಕಾರ ತ್ಯಜಿಸಿ ವನವಾಸ ಮಾಡಿದವರಿಗೂ, ಇಂದು ಅಧಿಕಾರಕ್ಕಾಗಿ ರೆಸಾರ್ಟ್ ವಾಸ ಮಾಡುವವರಿಗೂ ಏನು ವ್ಯತ್ಯಾಸ?
ಅಂದಿನವರದು ಒಣವನವಾಸ, ಇಂದಿನವರದು ಝಣಝಣ ಮಾಸ!

ಎಂ.ಕೆ.ರವಿಕಾಂತ, ತುಮಕೂರು
ಬುದ್ಧಿಜೀವಿಗಳು ಎಂದರೇನು?
ತಮ್ಮನ್ನು ಬಿಟ್ಟರೆ ಜಗವೆಲ್ಲಾ ದಡ್ಡರಿಂದಲೇ ತುಂಬಿದೆ ಎಂದು ನಂಬಿರುವ ಪ್ರಾಣಿಗಳು.

ಎಸ್.ಎನ್.ಮಹಾಬಲರಾವ್, ನರಸಿಂಹರಾಜಪುರ
ಅಪ್ಪ ಬದಲು ಪಪ್ಪ ಯಾಕೆ?
ಅಮ್ಮ ಕರೆದಾಗ ಬಾಲ ಆಡಿಸುವನಲ್ಲಾ... ಪಪ್ಪಿ(ನಾಯಿಮರಿ)ಸ್ತ್ರೀಲಿಂಗ, ಪಪ್ಪ ಪುಲ್ಲಿಂಗ!

ಎನ್.ಆರ್.ದೇಸಾಯಿ, ರಾಯಚೂರು
ಹಿರಿಯರ ಸಮ್ಮುಖದಲ್ಲಿ ಮದುವೆಯಾದವರು ನ್ಯಾಯಾಧೀಶರ ಸಮ್ಮುಖದಲ್ಲಿ ಬೇರೆಯಾಗುವರೇಕೆ?
ನ್ಯಾಯವಾಗಿ ನೋಡಿದರೆ, ಅವರು ಮದುವೆಯಾಗುವಂತಿರಲಿಲ್ಲವಂತೆ!

ಬಿ.ಎಂ.ಪರಶಿವಮೂರ್ತಿ, ಬೆಂಗಳೂರು
ವೃದ್ಧಾಶ್ರಮ ಕಟ್ಟಿಸಬೇಕೆಂದಿದ್ದೇನೆ, ನಿಮ್ಮ ಕೈಲಾದ ಸಹಾಯ ಮಾಡ್ತೀರಾ?
ಖಂಡಿತ. ಕೂಡಲೆ ಆ ಆಶ್ರಮಕ್ಕೆ ನಾಲ್ಕು ವೃದ್ಧರನ್ನು ಕಳುಹಿಸುತ್ತೇನೆ.

ಎಂ.ಎಸ್.ಗುರುರಾಜಾಚಾರು, ಬಳ್ಳಾರಿ
ಕಳ್ಳರು ಕದಿಯದ, ರಾಜಕೀಯ ನಾಯಕರು ಕಸಿಯದ, ಅಣ್ಣ ತಮ್ಮರಿಗೆ ಹಂಚದ ವಸ್ತು ಯಾವುದು?
ಹಳೆಯ ಹರಿದ ಫುಟ್ ರಗ್.

ಎಚ್.ಆನಂದಕುಮಾರ್, ಚಿತ್ರದುರ್ಗ
ತಾನು ಉಣ್ಣುವಾಗ ತನ್ನ ತಟ್ಟೆಯನ್ನು ನೋಡದೆ, ಪರರ ತಟ್ಟೆಯನ್ನು ನೋಡುವ, ವಿಮರ್ಶಿಸುವವರಿಗೆ ನಿಮ್ಮ ಹಿತನುಡಿ?
ಸಮೀಪ ವಸ್ತು ಕಾಣದಂತಹ ದೃಷ್ಟಿದೋಷವಿದೆ. ಕೂಡಲೆ ಕನ್ನಡಕ ಬದಲಾಯಿಸಿ

ದಿವ್ಯಾರಾಣಿ, ಹಿರಿಸಾವೆ
ಕಣ್ಣಮುಂದೆ ಜೀವ ತೊರೆದ ಕಂದಮ್ಮನ ನೋಡಿ ರೋದಿಸುವ ತಾಯಿಗೆ ನಿಮ್ಮ ಸಾಂತ್ವನ?
ಬೆಚ್ಚಿದ ಹೃದಯಕ್ಕೆ ಸಾಂತ್ವನ ಹೇಳುವ ಶಕ್ತಿ ಇರುವುದು ಕಾಲರಾಯನಿಗೆ ಮಾತ್ರ.

## ಬಹುಮಾನಿತ ಪ್ರಶ್ನೆ

ಎಂ.ಬಿ.ಖೋದಾನಪೂರ, ಸವದತ್ತಿ
ಕೆಲವರು ಎಂಜಲನ್ನ ಆಗುತ್ತಾರಲ್ಲಾ?
ವೆರಿಗುಡ್. ಪ್ರತಿ ನೈವೇದ್ಯವೂ ದೇವನ ಎಂಜಲೇ ಅಲ್ಲವೇ..

ಅಭಿಷೇಕ್ ಆರ್ ರೆಡ್ಡಿ, ಗೌರಿಬಿದನೂರು
ಕವಿಗಳಿಗೂ, ಕಪಿಗಳಿಗೂ ಮತ್ತು ಕತೆಗೂ, ಕತ್ತೆಗೂ ವ್ಯತ್ಯಾಸವೇನು ಅಂಕಲ್/ಆಂಟಿ?
ಕವಿ ಕೊರೆ ಕೊರೆಯುವನು, ಕಪಿ ಕಿರಿಕಿರಿಯುವುದು; ಕತೆ ಸೀರಿಯಲ್ ಆಗಿ ವರ್ಷಗಟ್ಟಲೆ ಒದೆಯುತ್ತದೆ, ಕತ್ತೆ ಒಮ್ಮೆ ಮಾತ್ರ.

ಪಿ.ಎನ್.ಶ್ರೀವತ್ಸ, ಬೆಂಗಳೂರು
ಆಧ್ಯಾತ್ಮಿಕ - ಇದರ ನಿಜವಾದ ಅರ್ಥವೇನು?
ಕಾಣದ್ದನ್ನು ಕಾಣಲು ಕಣ್ಣುಕಣ್ಣು ಬಿಡುವ ಮಿಕ!

ವಿ. ಹಮೀದ್, ವಿಟ್ಲ
ಕನಸಿಗೂ, ಮನಸ್ಸಿಗೂ ಇರುವ ವ್ಯತ್ಯಾಸವೇನು?
ಕನಸನ್ನು ಹತೋಟಿಗೆ ತರಲಾಗದು!

ಸುಧಾ ವಿ, ಕಾಚರಕನಹಳ್ಳಿ
ಮನುಷ್ಯನಿಗೆ ಎರಡರ ಬದಲು ನಾಲ್ಕು ಕೈ , ಕಾಲುಗಳಿದ್ದಿದ್ದರೆ?



ಟೈಲರ್‌ಗಳಿಗೆ ಕೆಲಸ ಹೆಚ್ಚಾಗುತ್ತಿತ್ತು.

ಸೊಂ.ನಾ.ಶ್ರೀಧರಮೂರ್ತಿ, ದಾವಣಗೆರೆ
ಗು=ಅಂಧಕಾರ, ರು= ಹೋಗಲಾಡಿಸುವವನು ಎನ್ನುತ್ತಾರಲ್ಲಾ, ನಿಜವೇ?
ಅದು ಅಂದಿಗೆ ನಿಜ. ಈಗ ಗು – ಗುಡ್ಡದಷ್ಟು, ರು–ರುಪಾಯಿಗಳು!

'ನೀವು ಕೇಳಿದಿರಿ' ಪ್ರಶ್ನೋತ್ತರ ವಿಭಾಗಕ್ಕೆ ನಿರಂತರವಾಗಿ ಕಳೆದ 40 ವರ್ಷಗಳಿಂದಲೂ ಪ್ರಶ್ನೆಗಳನ್ನು ಕಳುಹಿಸುತ್ತಿದ್ದವರು ಸೊಂ.ನಾ. ಶ್ರೀಧರ ಮೂರ್ತಿ. ಸೇನೆಯಲ್ಲಿ ಸೇವೆ ಸಲ್ಲಿಸಿ ನಿವೃತ್ತರಾಗಿ, ಬಳಿಕ ಅಂಚೆ ಇಲಾಖೆಯಲ್ಲೂ ಸೇವೆ ಸಲ್ಲಿಸಿದವರು. ಅಲ್ಲಿಂದ ನಿವೃತ್ತರಾದ ಬಳಿಕವೂ ಪ್ರಶ್ನೆಗಳನ್ನು ಕಳುಹಿಸುತ್ತಲೇ ಇದ್ದರು. ವಿಷಾದದ ವಿಷಯವೆಂದರೆ ಇತ್ತೀಚೆಗೆ ಅವರು ಕೊನೆಯುಸಿರೆಳೆದರು. ಇದು ಅವರು ಕೇಳಿರುವ ಕೊನೆಯ ಕಂತಿನ ಪ್ರಶ್ನೆ. ಒಂದೇ ಸಲಕ್ಕೆ ಐದಾರು ಪ್ರಶ್ನೆಗಳನ್ನು ಕೇಳುತ್ತಿದ್ದ ಶ್ರೀಧರಮೂರ್ತಿಯವರು ಈ ಕಾಲಂನಲ್ಲಿ ಹಲವು ಸಲ ಬಹುಮಾನ ಗೆದ್ದಿದ್ದಾರೆ.
-ಸಂ.

■ ರಾಮ್